# ಕರ್ನಾಟಕ ಸರ್ಕಾರ

ಸಂ: ಟಿಡಿ 160 ಟಿಡಿಒ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:14-07-2021.

## ಅಧಿಸೂಚನೆ

ಕಳೆದ ಕೆಲವು ದಶಕಗಳಲ್ಲಿ ಭಾರತದ ನಗರಗಳು ಕೈಗೆಟುಕುವ ರೀತಿಯ ಸಾರ್ವಜನಿಕ ಸಾರಿಗೆಯನ್ನು ತರುವಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿವೆ. ಈ ಹಿಂದೆ ನಗರ ಬಸ್ಸುಗಳ ಸೇವೆಗೆ ಗಮನವನ್ನು ಕೇಂದ್ರೀಕರಿಸಿದರೂ ಕಾಲಾನಂತರದಲ್ಲಿ ಅನೇಕ ನಗರಗಳು ಮೆಟ್ರೋ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ಅದು ಜನರ ಕ್ಷಿಪ್ರ ಸಂಚಾರದಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುವಲ್ಲಿ ಮತ್ತು ನಗರಗಳ ತ್ವರಿತ ಆರ್ಥಿಕ ಬೆಳವಣಿಗೆಗೆ ಕಾರಣವಾಯಿತು. ಇವುಗಳ ಜೊತೆಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸಲು ನಗರಗಳು ಟ್ಯಾಕ್ಸಿ ಸೇವೆಗಳನ್ನು, ಆಟೋ ಸೇವೆಗಳನ್ನು ಹೊಂದಿರುತ್ತವೆ. ಟ್ಯಾಕ್ಸಿಗಳ ಸೇವಾ ಸಂಗ್ರಹಕಾರರು (aggregators) ಸಂಚಾರ ಕ್ಷೇತ್ರದ ಮಾರುಕಟ್ಟೆಯನ್ನು ಪ್ರವೇಶಿಸಿರುತ್ತಾರೆ ಹಾಗೂ ಬಹಳಷ್ಟು ನಗರಗಳಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿರುತ್ತಾರೆ. ಸಾರ್ವಜನಿಕ ಸಾರಿಗೆ ಸೌಲಭ್ಯಗಳಲ್ಲಿ ಅಸಾಧಾರಣ ಪ್ರಗತಿಯ ಜೊತೆಜೊತೆಗೆ ಸಂಚಾರ ವ್ಯವಸ್ಥೆಗೆ ಸೇವಾ ಸಂಗ್ರಹಕಾರರ ಬೃಹತ್ ಪ್ರವೇಶವು ಒಂದೆಡೆಯಾದರೆ, ಮತ್ತೊಂದೆಡೆಯಲ್ಲಿ ನಗರಗಳು ಇವತ್ತಿಗೂ ಭಾರಿ ಸಂಚಾರ ದಟ್ಟಣೆಯ ಸಮಸ್ಯೆಗಳಿಂದ ಬಳಲುತ್ತಿದೆ. ಇದು ಉಂಟಾಗಲು ಕಾರಣ ಇಂದಿಗೂ ಬಹಳಷ್ಟು ಸಂಖ್ಯೆಯ ಮಧ್ಯಮ ವರ್ಗದ ಜನರು ಸಂಚಾರಕ್ಕಾಗಿ ಖಾಸಗಿ ವಾಹನಗಳನ್ನು ಬಳಸುತ್ತಿರುವುದು. ಮೊದಲ ಮತ್ತು ಕೊನೆಯ ಹಂತದ ಸಾರಿಗೆ ಸಂಪರ್ಕದ ಮಾರುಕಟ್ಟೆಯಲ್ಲಿನ ಅಂತರವು ಸಾರ್ವಜನಿಕ ಸಾರಿಗೆ ಬಳಸಲು ಮುಂದೆ ಬರುವಲ್ಲಿ ಬಹುಮುಖ್ಯ ಅಡಚಣೆಯಾಗಿ ಪರಿಣಮಿಸಿದೆ. ಮೊದಲ ಮತ್ತು ಕೊನೆಯ ಹಂತದ ಸಾರಿಗೆ ಸಂಪರ್ಕವನ್ನು ಕೈಗೆಟುಕುವ ಬೆಲೆಯಲ್ಲಿ ಒದಗಿಸುವ ವ್ಯವಸ್ಥೆಯನ್ನು ತರುವ ತುರ್ತು ಅವಶ್ಯಕತೆ ಇರುವುದರಿಂದ

ಮತ್ತು ಲಭ್ಯವಿರುವ ಆಯ್ಕೆಗಳಲ್ಲಿ ಬೈಕ್ ಟ್ಯಾಕ್ಸಿಯು ಒಂದಾಗಿದ್ದು ಮತ್ತು ಅನೇಕ ರಾಜ್ಯಗಳು ಒಂದಲ್ಲ ಒಂದು ಮಾದರಿಯಲ್ಲಿ ನಗರ ಸಂಚಾರವನ್ನು ಪ್ರಾರಂಭಿಸಿದ್ದು, ಬೈಕ್ ಟ್ಯಾಕ್ಸಿಯು ನಾಗರೀಕರಿಗೆ ಮೊದಲ ಮತ್ತು ಕೊನೆಯ ಹಂತದ ಸಾರಿಗೆ ಸಂಪರ್ಕಕ್ಕೆ ಪರಿಹಾರವಾಗಲಿದ್ದು, ಇದರಿಂದಾಗಿ ಜನರು ಸಾರ್ವಜನಿಕ ಸಾರಿಗೆಯನ್ನು ಪಡೆಯಲು ಹಾಗೂ ವಿಶೇಷವಾಗಿ ಮೆಟ್ರೋ ಸೇವೆಗಳನ್ನು ಪಡೆಯಲು ಅನುಕೂಲವಾಗಲಿದೆ. ಇದು ಸರಳ ಉದ್ಯಮಶೀಲ ಅವಕಾಶಗಳನ್ನು ಸಹ ಸೃಜಿಸುವುದು. ಭಾರತ ಸರ್ಕಾರವು ಕಳೆದ ಕೆಲವು ವರ್ಷಗಳಲ್ಲಿ, ರಾಜ್ಯಗಳ ಮೂಲಕ ನಿರ್ಧರಿಸಬೇಕಾದ ಕೆಲವು ನಿರ್ಬಂಧಗಳ ಜೊತೆಗೆ ನಗರ ಪ್ರದೇಶಗಳಲ್ಲಿ ಬೈಕ್ ಟ್ಯಾಕ್ಸಿಯನ್ನು ಪ್ರಾರಂಭಿಸಲು ರಾಜ್ಯಗಳಿಗೆ ಅವಕಾಶ ಕಲ್ಪಿಸುವ ಉದ್ದೇಶದೊಂದಿಗೆ ಮೋಟಾರು ವಾಹನ ಅಧಿನಿಯಮ, 1988ಕ್ಕೆ ಹಲವು ನೀತಿ ಚೌಕಟ್ಟುಗಳನ್ನು ಮತ್ತು ತಿದ್ದುಪಡಿಗಳನ್ನು ತಂದಿರುತ್ತದೆ. ಭಾರತ ಸರ್ಕಾರವು ನಗರಗಳಲ್ಲಿ ಮಾಲಿನ್ಯವನ್ನು ತಡೆಯುವ ಮತ್ತು ಪರಿಸರ ಸ್ನೇಹಿ ಸಾರಿಗೆ ಪರಿಹಾರವನ್ನು ಬೆಂಬಲಿಸುವ ಉದ್ದೇಶದೊಂದಿಗೆ ವಿದ್ಯುತ್ ವಾಹನಗಳನ್ನು ಉತ್ತೇಜಿಸಲು ಹಲವು ಉಪಬಂಧಗಳನ್ನು ಸಹ ಕಲ್ಪಿಸಿದೆ. ಕರ್ನಾಟಕ ರಾಜ್ಯವು, ಸಂಚಾರದಟ್ಟಣೆಯ ಸಮಸ್ಯೆ ಹಾಗೂ

ಮೊದಲ ಮತ್ತು ಕೊನೆಯ ಹಂತದ ಸಾರಿಗೆ ಸಂಪರ್ಕದ ಸಮಸ್ಯೆಯಿಂದ ಬಳಲುತ್ತಿರುವ ಅನೇಕ ನಗರ ಕೇಂದ್ರಗಳನ್ನು ಹೊಂದಿದೆ.

ಮೋಟಾರು ವಾಹನಗಳ ಅಧಿನಿಯಮ, 1988 ರ (1988ರ ಕೇಂದ್ರ ಅಧಿನಿಯಮ 59) 2ನೇ ಪ್ರಕರಣದ (27) ನೇ ಖಂಡವು ಮೋಟಾರು ಸೈಕಲ್‌ನ ಪರಿಭಾಷೆಯನ್ನು "ಎಂದರೆ ಯಾವುದೇ ಬೇರ್ಪಡಿಸಬಹುದಾದ ಪಕ್ಕದ ಆಸನವನ್ನು ಒಳಗೊಂಡ ಮೋಟಾರು ವಾಹನಕ್ಕೆ ಜೋಡಿಸಿದ ಪ್ರತ್ಯೇಕ ಚಕ್ರವನ್ನು ಹೊಂದಿರುವ ಎರಡು ಚಕ್ರದ ಮೋಟಾರು ವಾಹನ" ಎಂಬುದಾಗಿ ಉಪಬಂಧಿಸಿದೆ. ಎಸ್.ಓ. ಸಂಖ್ಯೆ:1248(ಇ), ದಿನಾಂಕ:05-11-2014 ರಲ್ಲಿ ಸಾರಿಗೆ ಮತ್ತು ಸಾರಿಗೆಯೇತರ ಎರಡೂ ವರ್ಗಗಳ ಅಡಿಯಲ್ಲಿ ಮೋಟಾರು ಸೈಕಲುಗಳ ನೋಂದಣಿಗೆ ಅನುಮತಿಸಲಾಗಿದೆ. ಮೋಟಾರು ವಾಹನಗಳ ಅಧಿನಿಯಮ, 1988ರ (1988 ರ ಕೇಂದ್ರ ಅಧಿನಿಯಮ 59) ಎರಡನೇ ಪ್ರಕರಣದ (27) ನೇ ಖಂಡದ ಪ್ರಕಾರ ಸಾರಿಗೆ ವಾಹನವನ್ನು ಎಂದರೆ ಇತರ ವಿಷಯಗಳೊಂದಿಗೆ ಸಾರ್ವಜನಿಕ ಸೇವಾ ವಾಹನವಾಗಿದ್ದು, ಮತ್ತು ಮೋಟಾರು ವಾಹನಗಳ ಅಧಿನಿಯಮ, 1988ರ 2ನೇ ಪ್ರಕರಣದ (35) ನೇ ಖಂಡದ ಪ್ರಕಾರ "ಸಾರ್ವಜನಿಕ ಸೇವಾ ವಾಹನ" ಎಂದರೆ ಬಾಡಿಗೆ ಅಥವಾ ಸಂಭಾವನೆಗಾಗಿ ಪ್ರಯಾಣಿಕರನ್ನು ಕರೆದೊಯ್ಯಲು ಬಳಸುವ ಅಥವಾ ಬಳಸಲು ಅಳವಡಿಸಿಕೊಂಡ ಯಾವುದೇ ವಾಹನ ಎಂದಿರುವುದರಿಂದ.

ಹಾಗೂ, ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) 73 ಮತ್ತು 74ನೇ ಪ್ರಕರಣಗಳು ದ್ವಿಚಕ್ರ ವಾಹನಗಳನ್ನು ಒಳಗೊಂಡು ಎಲ್ಲಾ ವಿವಿಧ ವಾಹನಗಳಿಗೆ ಕರಾರು ಸಾರಿಗೆ ಪರವಾನಗಿಗಳನ್ನು ನೀಡಲು ರಾಜ್ಯಗಳಿಗೆ ಅಧಿಕಾರ ನೀಡುತ್ತದೆ. ಮೋಟಾರು ವಾಹನಗಳ (ತಿದ್ದುಪಡಿ) ಅಧಿನಿಯಮ 2019, ದಿನಾಂಕ:09-08-2019 ರಲ್ಲಿ ಮೋಟಾರು ವಾಹನಗಳ ಅಧಿನಿಯಮ, 1988 ರ (1988ರ ಕೇಂದ್ರ ಅಧಿನಿಯಮ 59) 93ನೇ ಪ್ರಕರಣಕ್ಕೆ ತಿದ್ದುಪಡಿ ಜಾರಿಗೊಳಿಸುವ ಮೂಲಕ ಆಪ್ ಆಧಾರಿತ ಸಂಚಾರ ಪರಿಹಾರ ಸೇವಾಕಾರರನ್ನು ಮೋಟಾರು ವಾಹನಗಳ ಅಧಿನಿಯಮ 1988ರ ವ್ಯಾಪ್ತಿಗೆ ತರಲಾಗಿದೆ. ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಸ್.ಓ. 5333(ಇ), ದಿನಾಂಕ:18-10-2018 ರಲ್ಲಿ ಸರಕುಗಳು ಮತ್ತು ಪ್ರಯಾಣಿಕರ ವಾಹನವಾಗಿ ಬಳಸುವ ಪ್ರತಿಯೊಂದು ವಾಹನವೂ ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಲಾದ 66ನೇ ಪ್ರಕರಣದ (1)ನೇ ಉಪ ಪ್ರಕರಣದ ಉಪಬಂಧಗಳಿಂದ ಬ್ಯಾಟರಿ-ಚಾಲಿತ ವಾಹನಗಳನ್ನು ವಿನಾಯಿತಿಸಲಾಗಿದೆ.

ಸಾರ್ವಜನಿಕ ಸಾರಿಗೆಗಾಗಿ ಮೊದಲ ಮತ್ತು ಕೊನೆಯ ಹಂತದ ಸಾರಿಗೆ ಸಂಪರ್ಕವನ್ನು ಕಲ್ಪಿಸುವ ಮತ್ತು ಸ್ವಯಂ-ಉದ್ಯೋಗ ಅವಕಾಶವನ್ನು ಒದಗಿಸುವ ಉದ್ದೇಶದಿಂದ, ಕರ್ನಾಟಕ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಿಂದ ವಿದ್ಯುತ್ ಬೈಕ್ ಟ್ಯಾಕ್ಸಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ನಿಯಂತ್ರಿಸುವುದಕ್ಕಾಗಿ ಈ ಕೆಳಕಂಡಂತೆ ಯೋಜನೆಯನ್ನು ರೂಪಿಸುತ್ತಿದೆ, ಎಂದರೆ:-

ಪ್ರಯುಕ್ತ ಮೋಟಾರು ವಾಹನ ಕಾಯ್ದೆ 1988 ರ (1988ರ ಕೇಂದ್ರ ಅಧಿನಿಯಮ 59) ರ ಕಲಂ 2ರ ಉಪ ಕಲಂ (1) ಕ್ರಮ ಸಂಖ್ಯೆ:38 (ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ಯೋಜನೆಯನ್ನು ರೂಪಿಸುತ್ತದೆ. ಎಂದರೆ:

1. **ಶೀರ್ಷಿಕೆ, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ** – (1) ಈ ಯೋಜನೆಯನ್ನು "ಕರ್ನಾಟಕ ವಿದ್ಯುತ್ ಬೈಕ್ ಟ್ಯಾಕ್ಸಿ ಯೋಜನೆ, 2021" ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ನಗರ ಪ್ರದೇಶಗಳಿಗೆ ಅನ್ವಯವಾಗತಕ್ಕದ್ದು.

(3) ಇದು ಸರ್ಕಾರದ ರಾಜ್ಯ ಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(4) ಈ ಯೋಜನೆಯು ಬ್ಯಾಟರಿ ಚಾಲಿತ ವಿದ್ಯುತ್ ಮೋಟಾರು ಸೈಕಲ್ ಅಥವಾ ವಿದ್ಯುತ್ ಬೈಕ್‌ಗಳಿಗೆ ಮಾತ್ರ ಅನ್ವಯವಾಗತಕ್ಕದ್ದು.

(5) ಇದು ಮೋಟಾರು ವಾಹನಗಳ ಅಧಿನಿಯಮ, 1988ರ (1988 ರ ಕೇಂದ್ರ ಅಧಿನಿಯಮ, 59) 93ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿನ (i) ನೇ ಖಂಡದಲ್ಲಿ ವಿಧಾನದಲ್ಲಿ ಉಪಬಂಧಿಸಿದಂತೆ, ಏಜೆಂಟ್ ಅಥವಾ ಪ್ರಚಾರಕನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಗೆ ಅನ್ವಯಿಸತಕ್ಕದ್ದು ಮತ್ತು ಅಂತಹ ವ್ಯಕ್ತಿಯು, ಪ್ರಯಾಣವನ್ನು ಕೈಗೊಳ್ಳಲು ವ್ಯಕ್ತಿಗಳು ಅಥವಾ ಪ್ರಯಾಣಿಕರು ಬಾಡಿಗೆಗಾಗಿ ಆಪೇಕ್ಷಿಸುವ ವಿದ್ಯುತ್ ಮೋಟಾರು ಸೈಕಲ್ ಅಥವಾ ವಿದ್ಯುತ್ ಬೈಕ್‌ನ್ನು ಒದಗಿಸುವ ವ್ಯವಹಾರದಲ್ಲಿ ವಿಶೇಷವಾಗಿ ತೊಡಗಿರಬೇಕು.

(6) ಇದು ಯಾರು ಸ್ವಂತ ವಿದ್ಯುತ್ ಮೋಟಾರ್ ಸೈಕಲ್ ಅಥವಾ ವಿದ್ಯುತ್ ಬೈಕನ್ನು ವ್ಯಕ್ತಿಗಳು ಅಥವಾ ಪ್ರಯಾಣಿಕರ ಪ್ರಯಾಣವನ್ನು ಕೈಗೊಳ್ಳಲು ಬಾಡಿಗೆಗಾಗಿ ಒದಗಿಸುವ ವ್ಯವಹಾರದಲ್ಲಿ ತಾನಾಗಿಯೇ ತೊಡಗಿರುವ ವ್ಯಕ್ತಿಗೆ ಅನ್ವಯವಾಗತಕ್ಕದ್ದು.

(7) ಈ ಯೋಜನೆಯ ಉದ್ದೇಶಕ್ಕಾಗಿ ವಿದ್ಯುತ್ ಬೈಕ್ ಟ್ಯಾಕ್ಸಿಯನ್ನು ಸಾರಿಗೆ ವರ್ಗದಲ್ಲಿ ಮೋಟಾರ್ ಸೈಕಲ್ ಎಂಬುದಾಗಿ ನೋಂದಣಿಯಾಗಿರತಕ್ಕದ್ದು ಮತ್ತು ಸಾರ್ವಜನಿಕ ಸೇವಾ ವಾಹನವಾಗಿ ಬಳಸತಕ್ಕದ್ದು.

2. **ಪರಿಭಾಷೆಗಳು** - (1) ಈ ಯೋಜನೆಯಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸದ ಹೊರತು.-

(ಎ) "ಅಧಿನಿಯಮ" ಎಂದರೆ ಮೋಟಾರು ವಾಹನಗಳ ಅಧಿನಿಯಮ, 1988 (1988 ರ ಕೇಂದ್ರ ಅಧಿನಿಯಮ 59);

(ಬಿ) "ಪ್ರಾಧಿಕಾರ" ಎಂದರೆ ಈ ಯೋಜನೆಯ ಅಡಿಯಲ್ಲಿ ಪರವಾನಗಿಯನ್ನು ನೀಡುವ ಈ ಕೆಳಕಂಡ ಸಕ್ಷಮ ಪ್ರಾಧಿಕಾರ:-

- (i) 100 ಅಥವಾ ಹೆಚ್ಚಿನ ಬೈಕುಗಳ ಸಂದರ್ಭದಲ್ಲಿ ರಾಜ್ಯ ಸಾರಿಗೆ ಪ್ರಾಧಿಕಾರ;
- (ii) 100 ಕ್ಕಿಂತ ಕಡಿಮೆ ಬೈಕುಗಳ ಸಂದರ್ಭದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ವ್ಯಕ್ತಿಗತ ಬೈಕುಗಳನ್ನು ಹೊರತುಪಡಿಸಿ; ಮತ್ತು
- (iii) ವ್ಯಕ್ತಿಗತ ಬೈಕುಗಳ ಸಂದರ್ಭದಲ್ಲಿ ಅಧಿಕಾರ ವ್ಯಾಪ್ತಿಯ ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ.

(ಸಿ) "ವಿದ್ಯುತ್ ಬೈಕ್" ಎಂದರೆ ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989 ರ 2ನೇ ನಿಯಮದ (ಯು) ಖಂಡದ ಅಡಿಯಲ್ಲಿ ಪರಿಭಾಷಿಸಿದಂತೆ ಬ್ಯಾಟರಿ ಚಾಲಿತ ವಾಹನ ವರ್ಗದ ಅಡಿಯಲ್ಲಿನ ಬ್ಯಾಟರಿ ಚಾಲಿತ ಮೋಟಾರು ಸೈಕಲ್;

(ಡಿ) "ನಮೂನೆ" ಎಂದರೆ ಈ ಯೋಜನೆಯೊಂದಿಗೆ ಲಗತ್ತಿಸಲಾದ ನಮೂನೆ;

(ಇ) "ವ್ಯಕ್ತಿಗತ ಬೈಕ್ ಪ್ರಕರಣ" ಎಂದರೆ ಎಲೆಕ್ಟ್ರಿಕ್ ಬೈಕನ್ನು ಹೊಂದಿರುವ ವ್ಯಕ್ತಿ ಮತ್ತು ಈ ಯೋಜನೆಯ ಅಡಿಯಲ್ಲಿ ಆತನೇ ಚಾಲಕನಾಗಿ ಸೇವೆಯನ್ನು ಒದಗಿಸುವ ಪ್ರಕರಣ;

(ಎಫ್) "ಪರವಾನಗಿ" ಎಂದರೆ ಪ್ರಧಾನ ಸ್ಥಾಪನೆಗಾಗಿ ಈ ಯೋಜನೆಯ ಅಡಿಯಲ್ಲಿ ಮಂಜೂರು ಮಾಡಿದ ಅಥವಾ ನವೀಕರಿಸಿದ ಪರವಾನಗಿ ಹಾಗೂ ಯಾವುದೇ ಸ್ಥಾಪನೆ ಅಥವಾ ಶಾಖಾ ಕಛೇರಿಗಾಗಿ ಅರ್ಜಿದಾರನಿಗೆ ಅಂಥ ಪೂರಕ ಪರವಾನಗಿಯಲ್ಲಿ ನಿರ್ದಿಷ್ಟಪಡಿಸಿ ಮಂಜೂರು ಮಾಡಿದ ಪೂರಕ ಪರವಾನಗಿಯನ್ನು ಒಳಗೊಳ್ಳುವುದು;

(ಜಿ) "ಪರವಾನಗಿದಾರ" ಅಥವಾ ಕಾರ್ಯನಿರ್ವಾಹಕ (operator) ಎಂದರೆ ಈ ಯೋಜನೆ ಅಡಿಯಲ್ಲಿ ಪರವಾನಗಿಯನ್ನು ಹೊಂದಿರುವವನು;

(ಎಚ್) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ:

(ಐ) "ಸೇವಾದಾತ" ಎಂದರೆ ವಾಹನದ ಮಾಲೀಕನಾದ ವ್ಯಕ್ತಿ.

(2) ಈ ಯೋಜನೆಯಲ್ಲಿ ಬಳಸಿದ ಆದರೆ ಪರಿಭಾಷಿಸಿಲ್ಲದ ಪದಗಳು ಮತ್ತು ಪದಾವಳಿಗಳು, ಹಾಗೂ ಅವುಗಳಿಗೆ ಅಧಿನಿಯಮ, ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989 ಮತ್ತು ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೇಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016 ರಲ್ಲಿ ನೀಡಲಾದ ಅದೇ ಅರ್ಥಗಳನ್ನು ಹೊಂದಿರತಕ್ಕದ್ದು.

**3. ಕಾರ್ಯನಿರ್ವಾಹಕನಿಗೆ ಪರವಾನಗಿ ನೀಡುವಿಕೆ -**

(i) ಸಕ್ಷಮ ಪ್ರಾಧಿಕಾರದಿಂದ ಪರವಾನಗಿಯನ್ನು ಪಡೆಯದ ಹೊರತು ಯಾರೇ ವ್ಯಕ್ತಿಯು ಬೈಕ್ ಟ್ಯಾಕ್ಸಿ ಕಾರ್ಯಾಚರಣೆಯ ವ್ಯವಹಾರದಲ್ಲಿ ತಾನು ತೊಡಗಿಸಿಕೊಳ್ಳತಕ್ಕದ್ದಲ್ಲ ಅಥವಾ ಬೈಕ್ ಟ್ಯಾಕ್ಸಿ ಏಜೆನ್ಸಿಯನ್ನು ನಡೆಸತಕ್ಕದ್ದಲ್ಲ.

(ii) ಈ ಯೋಜನೆಯ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಪರವಾನಗಿಯನ್ನು ನೀಡತಕ್ಕದ್ದು

(iii) ಈ ಯೋಜನೆಯ ಅಡಿಯಲ್ಲಿ ಪರವಾನಗಿಯನ್ನು ಪಡೆಯುವ ಯಾರೇ ವ್ಯಕ್ತಿಯು, ಅಧಿನಿಯಮದ 93ನೇ ಪ್ರಕರಣದ ಅಡಿಯಲ್ಲಿ 'ಏಜೆಂಟ್" ಎಂಬುದಾಗಿ ಭಾವಿಸತಕ್ಕದ್ದು.

(iv) ಈ ಯೋಜನೆಯ ಅಡಿಯಲ್ಲಿನ ಯಾವುದೇ ಪರವಾನಗಿ ವಿದ್ಯುತ್ ಬೈಕುಗಳಿಗಾಗಿ (ಮೋಟಾರು ಸೈಕಲ್) ಮಾತ್ರ ಇರತಕ್ಕದ್ದು.

(v) ಈ ಯೋಜನೆಯ ಅಡಿಯಲ್ಲಿ ನೀಡಲಾದ ಯಾವುದೇ ಪರವಾನಗಿ ಒಂದು ನಿರ್ದಿಷ್ಟ ನಗರಕ್ಕೆ ಮಾತ್ರ ಸಿಂಧುವಾಗಿರತಕ್ಕದ್ದು.

**4 ಪರವಾನಗಿಯ ಮಂಜಾರಾತಿ ಅಥವಾ ನವೀಕರಣಕ್ಕಾಗಿ ಅರ್ಜಿ -**

(i) ಯೋಜನೆಯ ಅಡಿಯಲ್ಲಿ ಪರವಾನಗಿಯ ಮಂಜೂರಾತಿ ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ನಮೂನೆ-1 ರಲ್ಲಿ ಮತ್ತು ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೇಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016 ರ 13ನೇ ನಿಯಮದಲ್ಲಿ ಉಪಬಂಧಿಸಿದಂತೆ ಸೂಕ್ತ ಅರ್ಜಿ ಶುಲ್ಕದೊಂದಿಗೆ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು;

ಪರಂತು ವ್ಯಕ್ತಿಗತ ಬೈಕಿನ ಪ್ರಕರಣದಲ್ಲಿ ಪರವಾನಗಿಯ ಮಂಜೂರಾತಿ ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ನಮೂನೆ-3ರಲ್ಲಿ ಸಲ್ಲಿಸತಕ್ಕದ್ದು ಹಾಗೂ ಯಾವುದೇ ಶುಲ್ಕವನ್ನು ಭರಿಸಿಕೊಳ್ಳತಕ್ಕದ್ದಲ್ಲ.

(ii) ಅರ್ಜಿದಾರನು ಯೋಜನೆಯ ಎಲ್ಲಾ ಷರತ್ತುಗಳನ್ನು ಹಾಗೂ ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೇಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016ರ 7ನೇ ನಿಯಮದ ಉಪಬಂಧವನ್ನು ಪೂರೈಸಿರುವನೆಂದು ಮನದಟ್ಟಾದ ತರುವಾಯ, ಪರವಾನಗಿ ನೀಡುವ ಪ್ರಾಧಿಕಾರವು ನಮೂನೆ-2 ರಲ್ಲಿ ಪರವಾನಗಿಯನ್ನು ನೀಡಬಹುದು. ವ್ಯಕ್ತಿಗತ ಬೈಕಿನ ಪ್ರಕರಣದಲ್ಲಿ ಪರವಾನಗಿಯನ್ನು ನಮೂನೆ-4 ರಲ್ಲಿ ನೀಡತಕ್ಕದ್ದು.

(iii) ನವೀಕರಣಕ್ಕಾಗಿ ಅರ್ಜಿಯನ್ನು ಪರವಾನಗಿ ಮುಕ್ತಾಯಗೊಳ್ಳುವ 30 ದಿವಸಗಳ ಮೊದಲು ಸಲ್ಲಿಸತಕ್ಕದ್ದು.

(iv) ಪರವಾನಗಿ ಮಂಜೂರಾತಿಯನ್ನು ತಿರಸ್ಕರಿಸುವ ಸಂದರ್ಭದಲ್ಲಿ, ಪರವಾನಗಿ ನೀಡುವ ಪ್ರಾಧಿಕಾರವು ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ತರುವಾಯ ಪರವಾನಗಿ ತಿರಸ್ಕರಿಸಲು ಕಾರಣಗಳನ್ನು ದಾಖಲಿಸಿ ಆದೇಶವನ್ನು ಹೊರಡಿಸತಕ್ಕದ್ದು.

5. **ಪರವಾನಗಿಯ ಸಿಂಧುತ್ವದ ಅವಧಿ** - ಈ ಯೋಜನೆಗಾಗಿ ಸಕ್ಷಮ ಪ್ರಾಧಿಕಾರವು ನೀಡಿದ ಪರವಾನಗಿ, ಅದನ್ನು ನೀಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು.

6. **ಭದ್ರತಾ ಠೇವಣಿ** - ಪರವಾನಗಿದಾರನು ಐದು ಸಾವಿರ ರೂಪಾಯಿಗಳ ನಗದು ಭದ್ರತಾ ಠೇವಣಿಯನ್ನು ಇರಿಸತಕ್ಕದ್ದು, ವ್ಯಕ್ತಿಗತ ಬೈಕಿನ ಪ್ರಕರಣದಲ್ಲಿ ಭದ್ರತಾ ಠೇವಣಿಯಿಂದ ವಿನಾಯಿತಿ ನೀಡತಕ್ಕದ್ದು.

7. **ಮೋಟಾರು ಸೈಕಲ್ ಅಥವಾ ಬೈಕ್ ಟ್ಯಾಕ್ಸಿಯ ಕಾರ್ಯಾಚರಣೆಯನ್ನು ನಿರ್ವಹಿಸುವ ಷರತ್ತುಗಳು** - (1) ಯಾವುದೇ ಸೇವದಾತನು ವ್ಯಕ್ತಿಗತವಾಗಲಿ, ಪಾಲುದಾರಿಕೆ ಅಧಿನಿಯಮ, 1932 ರ ಅಡಿಯಲ್ಲಿ ನೋಂದಾಯಿಸಿದ ಸಂಸ್ಥೆ ಅಥವಾ ಕಂಪೆನಿಗಳ ಅಧಿನಿಯಮ, 2013ರ ಅಡಿಯಲ್ಲಿ ನೋಂದಾಯಿಸಿದ ಕಂಪೆನಿಯಾಗಲಿ ಅಂಥ ಸೇವೆಯನ್ನು ಒದಗಿಸಲು ಇಚ್ಛೆಯುಳ್ಳವರು ಈ ಯೋಜನೆಯ ಅಡಿಯಲ್ಲಿ ಪರವಾನಗಿಯನ್ನು ಪಡೆದುಕೊಳ್ಳತಕ್ಕದ್ದು.

(2) ಸೇವಾದಾತರು ಅಂಥ ಸೇವೆಗಳನ್ನು ಪ್ರಾರಂಭಿಸಲು ವಿದ್ಯುತ್ ಬೈಕ್ ಟ್ಯಾಕ್ಸಿ ಸ್ವಂತದ್ದನ್ನು ಅಥವಾ ಕರಾರುಗಳನ್ನು ಹೊಂದಿರತಕ್ಕದ್ದು. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957ರ ಅಥವಾ ಅದರ ಮೇರೆಗೆ ಮಾಡಲಾದ ನಿಯಮಗಳ ಅಡಿಯಲ್ಲಿ ಪಾವತಿಸಬಹುದಾದ ತೆರಿಗೆಯನ್ನು ಯುಕ್ತವಾಗಿ ಸಂದಾಯ ಮಾಡತಕ್ಕದ್ದು.

(3) ವಿದ್ಯುತ್ ಬೈಕ್ ಟ್ಯಾಕ್ಸಿಯು ಯುಕ್ತವಾಗಿ ನೋಂದಾಯಿತವಾಗಿರತಕ್ಕದ್ದು ಹಾಗೂ ಅಧಿನಿಯಮದ 56ನೇ ಪ್ರಕರಣದ ಉಪಬಂಧಗಳ ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಅನುಸಾರವಾಗಿ ಅರ್ಹತಾ ಪ್ರಮಾಣ ಪತ್ರ (Fitness Certificate) ಪಡೆಯುವುದು ಅಗತ್ಯವಾಗಿರತಕ್ಕದ್ದು.

(4) ಎಲ್ಲಾ ಅಂಥ ಬೈಕ್ ಟ್ಯಾಕ್ಸಿಗಳ ಯುಕ್ತ ನಿರ್ವಹಣೆಯನ್ನು ಕಲ್ಪಿಸುವುದರೊಂದಿಗೆ ಅವುಗಳ ಗ್ಯಾರೇಜ್ ಅಥವಾ ನಿಲುಗಡೆಗಾಗಿ ಸಾಕಷ್ಟು ಸೌಕರ್ಯಗಳನ್ನು ಪರವಾನಗಿದಾರನು ಒದಗಿಸತಕ್ಕದ್ದು.

(5) ವಿದ್ಯುತ್ ಮೋಟಾರ್ ಸೈಕಲನ್ನು ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಯುಕ್ತವಾಗಿ ವಿಮೆ ಮಾಡಿಸಿರತಕ್ಕದ್ದು.

(6) ಒಂದು ಪ್ರಯಾಣದ ಮೊದಲ ಮತ್ತು ತಲುಪಬೇಕಾದ ಸ್ಥಳದ ನಡುವಣ ಅಂತರವು 10 ಕಿ.ಮೀ. ಗಿಂತ ಹೆಚ್ಚಾಗಿರತಕ್ಕದ್ದಲ್ಲ.

(7) ಬೈಕ್ ಟ್ಯಾಕ್ಸಿ ಯೋಜನೆ ಕಾರ್ಯಾಚರಣೆಯಿಂದ ಹೊರತುಗೊಳಿಸತಕ್ಕ ಮಾರ್ಗಗಳ ಕುರಿತು ಸಕ್ಷಮ ಪ್ರಾಧಿಕಾರವು ಕಾಲಕಾಲಕ್ಕೆ ನಿರ್ಧರಿಸತಕ್ಕದ್ದು.

(8) ಅಧಿನಿಯಮ ಮತ್ತು ಅದರ ಮೇರೆಗೆ ಮಾಡಲಾದ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಚಾಲಕನು ಹೆಲ್ಮೆಟ್‌ನ್ನು ಬಳಸತಕ್ಕದ್ದು ಹಾಗೂ ಪ್ರಯಾಣಿಕನಿಗೆ ಒದಗಿಸತಕ್ಕದ್ದು. ಹೆಲ್ಮೆಟ್‌ಗಳು ಹಳದಿ ಬಣ್ಣದ್ದಾಗಿರತಕ್ಕದ್ದು. ಚಾಲಕನು "ವಿದ್ಯುತ್ ಬೈಕ್ ಟ್ಯಾಕ್ಸಿ" ಎಂದು ಗುರುತಿಸಲಾದ ಪ್ರತಿಫಲಿಸುವ ಬಣ್ಣದ ಜಾಕೆಟ್ಟನ್ನು ಧರಿಸಿರತಕ್ಕದ್ದು.

(9) ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಸ್.ಒ.5333(ಇ), ದಿನಾಂಕ:18-10-2018 ರ ಅನುಸಾರವಾಗಿ ವಿನಾಯಿತಿಸಿರುವಂತೆ ವಿದ್ಯುತ್ ಮೋಟಾರ್ ಸೈಕಲ್ಲುಗಳಿಗೆ ಪರವಾನಗಿಯ ಅಗತ್ಯವಿರುವುದಿಲ್ಲ. ಮೋಟಾರು ವಾಹನಗಳ ಅಧಿನಿಯಮ 1988ರ 2(7)ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಬೈಕ್ ಟ್ಯಾಕ್ಸಿಯನ್ನು "ಕರಾರು ಸಂಚಾರ" ಎಂದು ಬಳಸತಕ್ಕದ್ದು.

(10) ಸಾರಿಗೆ ಇಲಾಖೆಯು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ ಪ್ರಯಾಣಿಕರ ಸುರಕ್ಷತೆ ಮತ್ತು ಭದ್ರತೆಗಾಗಿ ಹಲವು ಕ್ರಮಗಳನ್ನು ಸೇವಾದಾತರು ಪಾಲಿಸತಕ್ಕದ್ದು.

(11) ವ್ಯಕ್ತಿಗತವಾಗಲಿ ಅಥವಾ ಸೇವಾದಾತನಿಂದ ನೇಮಿಸಿದವನಾಗಲಿ ಚಾಲಕನು ದ್ವಿಚಕ್ರ ವಾಹನ ಚಾಲನೆಗೆ ಸಿಂಧುವಾದ ಹಾಗೂ ಈ ಅಧಿನಿಯಮದ ಉಪಬಂಧಗಳು ಮತ್ತು ಅದರಡಿಯಲ್ಲಿ ಮಾಡಿದ ನಿಯಮಗಳಿಗೆ ಬದ್ಧವಾದ ಪರವಾನಗಿಯನ್ನು ಹಾಗೂ ಬೈಕ್ ಟ್ಯಾಕ್ಸಿ ಚಾಲನೆಗೆ ಪರವಾನಗಿದಾರನಿಂದ ಅಧಿಕಾರಯುಕ್ತ ಪತ್ರವನ್ನು ಹೊಂದಿರತಕ್ಕದ್ದು.

(12) ನೇಮಕಗೊಂಡ ಎಲ್ಲಾ ಚಾಲಕರ ಪೂರ್ವಚರಿತ್ರೆಗಳನ್ನು ಸೇವಾದಾತರು ಕೂಲಂಕಷವಾಗಿ ಪರಿಶೀಲಿಸಿರತಕ್ಕದ್ದು ಮತ್ತು ಆತನಲ್ಲಿ ವೃತ್ತಿನಿರತರಾದ ಚಾಲಕರ ಪೂರ್ವಚರಿತ್ರೆಗಳ ವರದಿಯನ್ನು ಸೇವಾದಾತರ ಕಛೇರಿ ಇರುವ ಪ್ರದೇಶದಲ್ಲಿನ ಅಥವಾ ಕಾರ್ಯಾಚರಣೆ ನಡೆಸುವ ನಗರದಲ್ಲಿನ ಪೊಲೀಸ್ ಠಾಣೆಗೆ ಕಳುಹಿಸತಕ್ಕದ್ದು. ಸಂಬಂಧಪಟ್ಟ ಪೊಲೀಸ್ ಠಾಣೆಯಿಂದ ಚಾಲಕರ ಪೂರ್ವಚರಿತ್ರೆಗಳ ಕುರಿತು ಯಾವುದೇ ಪ್ರತಿಕೂಲ ವರದಿಯನ್ನು ಸ್ವೀಕರಿಸಿದ ಸಂದರ್ಭದಲ್ಲಿ ಅಂಥ ವರದಿಯನ್ನು ಸ್ವೀಕರಿಸಿದ ಮೇಲೆ ಸೇವಾದಾತರು ಚಾಲಕನನ್ನು ತಕ್ಷಣವೇ ಸೇವೆಯಿಂದ ವಜಾಗೊಳಿಸತಕ್ಕದ್ದು. ವ್ಯಕ್ತಿಗತ ಪ್ರಕರಣದಲ್ಲಿ, ಪರವಾನಗಿಗಾಗಿ ಅರ್ಜಿಯನ್ನು ನೀಡುವ ಸಂದರ್ಭದಲ್ಲಿ

ಪೂರ್ವಚರಿತ್ರೆಗಳ ವರದಿಯನ್ನು ಪೊಲೀಸ್ ಇಲಾಖೆಯಿಂದ ಅರ್ಜಿದಾರನು ಸಲ್ಲಿಸತಕ್ಕದ್ದು.

(13) ಪ್ರಯಾಣಿಕರ ಆದ್ಯತೆಯ ಪ್ರಯಾಣಗಳನ್ನು ನೇರ ಮತ್ತು ಹತ್ತಿರದ ಮಾರ್ಗದ ಆಧಾರದಲ್ಲಿ ಮಾತ್ರವೇ ನೀಡತಕ್ಕದ್ದು.

(14) 15 ವರ್ಷಗಳ ವಯಸ್ಸಿನೊಳಗಿನ ವ್ಯಕ್ತಿಗಳನ್ನು ಬಾಡಿಗೆದಾರರಾಗಿ ಕರೆದೊಯ್ಯಲು ಅನುಮತಿಸತಕ್ಕದ್ದಲ್ಲ. ಒಬ್ಬರಿಗಿಂತ ಹೆಚ್ಚು ಹಿಂಬದಿ ಸವಾರರನ್ನು ಅನುಮತಿಸತಕ್ಕದ್ದಲ್ಲ.

(15) ಕರೆದೊಯ್ಯುವ ಬಾಡಿಗೆದಾರನ ವೈಯಕ್ತಿಕ ಸರಕು ಆದಷ್ಟು ನಿಯಮಿತವಾಗಿರುವಂತೆ ಅಂದರೆ ಹೆಚ್ಚಲ್ಲದ ತೂಕದ ಸಾಮಾನ್ಯ ಗಾತ್ರದ ಹಿಂಬದಿ ಚೀಲ ಅಥವಾ ಕೈಯಲ್ಲಿ ಹಿಡಿಯುವ ಬ್ರೀಫ್‌ಕೇಸ್, ಇತ್ಯಾದಿಯನ್ನು ಅನುಮತಿಸತಕ್ಕದ್ದು.

(16) ಅಂಥ ಎಲ್ಲಾ ಬೈಕ್ ಟ್ಯಾಕ್ಸಿಗಳ ಬಣ್ಣವು ಸಾರಿಗೆ ಆಯುಕ್ತರು ನಿರ್ದಿಷ್ಟಪಡಿಸಿದಂತಹ ಬಣ್ಣದ್ದಾಗಿರತಕ್ಕದ್ದು. "ಬೈಕ್ ಟ್ಯಾಕ್ಸಿ" ಎಂಬ ಪದಗಳನ್ನು ಎರಡೂ ಬದಿಗಳ ವಾಹನದ ಮೇಲೆ ಎದ್ದುಕಾಣುವಂತೆ ಪ್ರತಿಫಲಿಸುವ ಬಣ್ಣದಲ್ಲಿ ಮಾತ್ರ ಬರೆದಿರತಕ್ಕದ್ದು ಹಾಗೂ ವಾಹನದ ಮುಂಭಾಗ ಮತ್ತು ಹಿಂಭಾಗ ಎರಡೂ ಕಡೆಗಳಲ್ಲಿ ಬಿಳಿಯಾಧಾರಿತ ಬಣ್ಣದಲ್ಲಿ ಹೆಚ್ಚುವರಿ ಫಲಕಗಳ ಮೇಲೆ "ಬೈಕ್ ಟ್ಯಾಕ್ಸಿ" ಎಂಬ ಪದಗಳನ್ನು ಪ್ರದರ್ಶಿಸತಕ್ಕದ್ದು.

**8. ಇತರ ಷರತ್ತುಗಳು** - (1) ವಾಹನಗಳು ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಹೊಂದಿರತಕ್ಕದ್ದು.

(2) ವಾಹನಗಳು ಕಾಲಕಾಲಕ್ಕೆ ಹೇಳಲಾದಂತೆ ಮಾಲಿನ್ಯತಾ ಮಾನದಂಡಗಳನ್ನು ಪೂರೈಸಿರತಕ್ಕದ್ದು.

(3) ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989 ರ 137ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದಂತೆ ಅಪಾಯಕಾರಿ ಅಥವಾ ಹಾನಿಕಾರಕ ಸರಕುಗಳನ್ನು ಅಥವಾ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಸರಕುಗಳನ್ನು ವಾಹನದಲ್ಲಿ ಸಾಗಿಸತಕ್ಕದ್ದಲ್ಲ.

(4) ಸೇವಾದಾತರ ಅಥವಾ ವ್ಯಕ್ತಿಯ ಮತ್ತು ಬೈಕ್ ಚಾಲಕನ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ಬಣ್ಣದಲ್ಲಿ ಬರೆದಿರತಕ್ಕದ್ದು ಅಥವಾ ಅನ್ಯಥಾ ಅಂಥ ಬೈಕಿನ ಬಣ್ಣಕ್ಕೆ ವಿಭಿನ್ನವಾಗಿ ಹೊಳೆಯುವ ಬಣ್ಣದಲ್ಲಿ ವಿದ್ಯುತ್ ಬೈಕಿನ ಹೊರ ಮೇಲ್ಮೈ ಮೇಲ ಸ್ಪಷ್ಟವಾಗಿ ಅಂಟಿಸಿರತಕ್ಕದ್ದು.

(5) ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತೆ ಎರಡು ಹಂತಗಳಲ್ಲಿ (i) 5 ಕಿ.ಮೀ. ವರೆಗೆ (ii) 5 ಕಿ.ಮೀ. ಮೇಲ್ಪಟ್ಟು 10 ಕಿ.ಮೀ. ವರೆಗೆ ಶುಲ್ಕವನ್ನು ವಿಧಿಸತಕ್ಕದ್ದು.

(6) ಸಂಚಾರ ಸುರಕ್ಷತೆಗೆ ಹಾನಿಕರ ಅಥವಾ ತೊಂದರೆ ಉಂಟಾಗುವ ರೀತಿಯಲ್ಲಿ ಯಾವುದೇ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ ಹಾಗೂ ರಾಜ್ಯ ಸಾರಿಗೆ ಪ್ರಾಧಿಕಾರವು ಈ ಕುರಿತು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳಿಗೆ ಅನುಸಾರವಾಗಿ ಕಟ್ಟುನಿಟ್ಟಾಗಿರತಕ್ಕದ್ದು.

(7) ಬಾಡಿಗೆದಾರನು ಪ್ರಯಾಣಿಸಿದ ಪ್ರಯಾಣದ ಅಂತರವನ್ನು ಬೈಕಿನಲ್ಲಿ ಅಳವಡಿಸಿದ ದೂರಮಾಪಕದ (odometer) ಆಧಾರದ ಮೇಲೆ ಲೆಕ್ಕಹಾಕತಕ್ಕದ್ದು. ಶುಲ್ಕವನ್ನು ಪ್ರಯಾಣದ ಅಂತರದ ಆಧಾರದ ಮೇಲೆ ವಸೂಲಿ ಮಾಡತಕ್ಕದ್ದು ಮತ್ತು ಪ್ರಯಾಣದ ಅವಧಿಯ ಆಧಾರದ ಮೇಲೆ ವಸೂಲಿ ಮಾಡತಕ್ಕದ್ದಲ್ಲ.

(8) ವಾಹನಗಳ ಬಳಕೆಯು ಸಂಚಾರ ಕಾನೂನುಗಳ ಅನುಸಾರವಾಗಿ ಇರತಕ್ಕದ್ದು ಮತ್ತು ವಿಶೇಷವಾಗಿ ಪಾದಚಾರಿ ಮಾರ್ಗದಲ್ಲಿ ಚಾಲನೆ ಮಾಡತಕ್ಕದ್ದಲ್ಲ.

(9) 50 ಕ್ಕಿಂತ ಹೆಚ್ಚು ಬೈಕ್ ಟ್ಯಾಕ್ಸಿಗಳನ್ನು ಹೊಂದಿರುವ ಸೇವಾದಾತರು ಜಾಗತಿಕ ಸ್ಥಾನಸೂಚಕ ವ್ಯವಸ್ಥೆಯನ್ನು (ಜಿ.ಪಿ.ಎಸ್.) ಜಾಡೀಕರಣವನ್ನು ಅಳವಡಿಸಿರತಕ್ಕದ್ದು ಹಾಗೂ ಅಗತ್ಯವಿದ್ದಾಗಲೆಲ್ಲಾ ಲಿಂಕುಗಳು ಅಥವಾ ಅನಿಸಿಕೆಗಳನ್ನು (feeds) ಜಾರಿ ಅಥವಾ ಆಡಳಿತ ನಿರ್ವಹಣಾ ಪ್ರಾಧಿಕಾರದೊಂದಿಗೆ ಹಂಚಿಕೊಳ್ಳತಕ್ಕದ್ದು.

9. **ವಿದ್ಯುತ್ ಬೈಕ್ ಟ್ಯಾಕ್ಸಿಯು ಪಾಲಿಸಬೇಕಾದ ಸಾಮಾನ್ಯ ಷರತ್ತುಗಳು** - ವಿದ್ಯುತ್ ಬೈಕ್ ಟ್ಯಾಕ್ಸಿಯನ್ನು ಚಾಲನೆ ಮಾಡವಾಗ ಚಾಲಕನು,-

(i) ಧೂಮಪಾನ ಮಾಡತಕ್ಕದ್ದಲ್ಲ ಅಥವಾ ಮದ್ಯಪಾನವನ್ನು ಮಾಡತಕ್ಕದ್ದಲ್ಲ ಅಥವಾ ಚಾಲನೆ ಮಾಡುವಾಗ ಮದ್ಯಪಾನದ ಮತ್ತಿನಲ್ಲಿರತಕ್ಕದ್ದಲ್ಲ;

(ii) ಪ್ರಯಾಣಿಕರೊಂದಿಗೆ ಅನಾಗರೀಕತೆಯಿಂದ ಅಥವಾ ಅನುಚಿತ ರೀತಿಯಲ್ಲಿ ವರ್ತಿಸತಕ್ಕದ್ದಲ್ಲ.

(iii) ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಬೈಕ್ ಟ್ಯಾಕ್ಸಿಯ ಅಥವಾ ಅದರ ಯಾವುದೇ ಇತರ ಜೋಡಣೆಗಳನ್ನು ಹಾನಿಗೊಳಿಸತಕ್ಕದ್ದಲ್ಲ; ಮತ್ತು

(iv) ಅಧಿಸೂಚಿತ ವೇಗಮಿತಿಗಳ ಉಪಬಂಧಗಳನ್ನು ಉಲ್ಲಂಘಿಸಿ ವಾಹನವನ್ನು ಚಾಲನೆ ಮಾಡತಕ್ಕದ್ದಲ್ಲ.

10. **ಪ್ರಯಾಣಿಕರು ಪಾಲಿಸಬೇಕಾದ ಸಾಮಾನ್ಯ ಷರತ್ತುಗಳು** - ವಿದ್ಯುತ್ ಬೈಕ್ ಟ್ಯಾಕ್ಸಿಯಲ್ಲಿ ಪ್ರಯಾಣಿಸುವಾಗ ಪ್ರಯಾಣಿಕರು,-

(i) ಧೂಮಪಾನ ಮಾಡತಕ್ಕದ್ದಲ್ಲ ಅಥವಾ ಮದ್ಯಪಾನ ಮಾಡತಕ್ಕದ್ದಲ್ಲ ಅಥವಾ ಮದ್ಯಪಾನ ಪದಾರ್ಥಗಳನ್ನು ಬಳಸತಕ್ಕದ್ದಲ್ಲ;

(ii) ಚಾಲಕರೊಂದಿಗೆ ಅನಾಗರೀಕತೆಯಿಂದ ಅಥವಾ ಅನುಚಿತ ರೀತಿಯಲ್ಲಿ ವರ್ತಿಸತಕ್ಕದ್ದಲ್ಲ;

(iii) ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಬೈಕ್ ಟ್ಯಾಕ್ಸಿ ಅಥವಾ ಅದರ ಯಾವುದೇ ಇತರ ಜೋಡಣೆಗಳನ್ನು ಹಾನಿಗೊಳಿಸತಕ್ಕದ್ದಲ್ಲ; ಮತ್ತು

(iv) ಅಧಿಸೂಚಿತ ವೇಗಮಿತಿಗಳ ಉಪಬಂಧಗಳನ್ನು ಉಲ್ಲಂಘಿಸಿ ವಾಹನ ಚಾಲನೆ ಮಾಡುವಂತೆ ಚಾಲಕನನ್ನು ಒತ್ತಾಯಿಸತಕ್ಕದ್ದಲ್ಲ.

11. **ಪರವಾನಗಿಯನ್ನು ಅಮಾನತುಗೊಳಿಸುವ ಅಥವಾ ರದ್ದುಪಡಿಸುವ ಪರವಾನಗಿ ನೀಡುವ ಪ್ರಾಧಿಕಾರದ ಅಧಿಕಾರ** - (1) ಪರವಾನಗಿದಾರನು 7, 8 ಮತ್ತು 10ನೇ ಕಂಡಿಕೆಗಳನ್ನು ಉಲ್ಲಂಘಿಸಿದ್ದಲ್ಲಿ, ಪರವಾನಗಿ ನೀಡುವ ಪ್ರಾಧಿಕಾರವು ಪರವಾನಗಿದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ತರುವಾಯ,-

(ಎ) ಯೋಜನೆಯಲ್ಲಿ ವಿವರಿಸಿದ ಯಾವುದೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಪಾಲಿಸಲು ಪರವಾನಗಿದಾರನು ವಿಫಲನಾಗಿರುವನೆಂದು; ಅಥವಾ

(ಬಿ) ಪರವಾನಗಿದಾರನು ಬೈಕ್ ಟ್ಯಾಕ್ಸಿಯನ್ನು ನಿರ್ವಹಿಸುವಾಗ ಅಧಿನಿಯಮದ ಮತ್ತು ಅದರಡಿಯಲ್ಲಿ ಮಾಡಿದ ನಿಯಮಗಳ ಉಪಬಂಧಗಳನ್ನು ಪಾಲಿಸುವಲ್ಲಿ ವಿಫಲನಾಗಿರುವನೆಂದು,

- ಅಭಿಪ್ರಾಯಪಟ್ಟಲ್ಲಿ, ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೇಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016 ರ 11ನೇ ನಿಯಮದ ಅಡಿಯಲ್ಲಿ ಪರವಾನಗಿ ನೀಡುವ ಪ್ರಾಧಿಕಾರವು 30 (ಮೂವತ್ತು) ದಿನಗಳಿಗೆ ಕಡಿಮೆ ಇಲ್ಲದಂತೆ ಆದರೆ 06 (ಆರು) ತಿಂಗಳುಗಳ ಅವಧಿಯವರೆಗೆ ಪರವಾನಗಿಯನ್ನು ಅಮಾನತ್ತುಪಡಿಸಬಹುದು ಅಥವಾ ಪರವಾನಗಿಯನ್ನು ರದ್ದುಪಡಿಸಬಹುದು.

(2) ಪರವಾನಗಿಯನ್ನು ರದ್ದುಪಡಿಸಲಾದ ಪ್ರತಿಯೊಬ್ಬ ಪರವಾನಗಿದಾರನು ರದ್ದತಿಯ ದಿನಾಂಕದಿಂದ ಆರು ತಿಂಗಳುಗಳ ಅವಧಿಯ ತರುವಾಯ ಮತ್ತೊಂದು ಪರವಾನಗಿಗಾಗಿ ಪರವಾನಗಿ ನೀಡುವ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಲು ಅನುಮತಿಸತಕ್ಕದ್ದು.

(3) (1)ನೇ ಉಪಖಂಡದ ಅಡಿಯಲ್ಲಿ, ಪರವಾನಗಿ ಅಮಾನತ್ತಾದರೆ ಅಥವಾ ರದ್ದುಗೊಂಡರೆ, ಪರವಾನಗಿದಾರನು ಪರವಾನಗಿ ನೀಡುವ ಪ್ರಾಧಿಕಾರಕ್ಕೆ ಪರವಾನಗಿಯನ್ನು ಒಪ್ಪಿಸತಕ್ಕದ್ದು ಮತ್ತು ಸೇವೆಯನ್ನು ಮುಂದುವರೆಸತಕ್ಕದ್ದಲ್ಲ.

12. **ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು** – ಪರವಾನಗಿದಾರನು ಯೋಜನೆಯ ಅಡಿಯಲ್ಲಿ ನಮೂದಿಸಿದ ನಿಬಂಧನೆಗಳು ಮತ್ತು ಷರತ್ತುಗಳನ್ನು ಪಾಲಿಸುವಲ್ಲಿ ವಿಫಲನಾದರೆ ಅಥವಾ ಪರವಾನಗಿದಾರನ ಯಾವುದೇ ಉದ್ಯೋಗಿಯು ಯಾವುದೇ ಪ್ರಯಾಣಿಕರೊಂದಿಗೆ ಪ್ರಯಾಣಿಸುವಾಗ ಯಾವುದೇ ಅನುಚಿತ ವರ್ತನೆ ಅಥವಾ ದುರ್ನಡತೆಗೆ ತಪ್ಪಿತಸ್ಥನಾದರೆ, ಆಗ ಪರವಾನಗಿ ನೀಡುವ ಪ್ರಾಧಿಕಾರವು ಪರವಾನಗಿಯನ್ನು ಅಮಾನತ್ತುಗೊಳಿಸಲು ಅಥವಾ ರದ್ದುಪಡಿಸಲು ಅಥವಾ ಅಪರಾಧದ ಗಂಭೀರತೆಯನ್ನು ಪರಿಗಣಿಸಿ ಸಂಪೂರ್ಣ ಭದ್ರತಾ ಠೇವಣಿ ಅಥವಾ ಅದರ ಸೂಕ್ತ ಭಾಗವನ್ನು ಮುಟ್ಟುಗೋಲು ಹಾಕಿಕೊಳ್ಳಲು ಮುಕ್ತನಾಗಿರತಕ್ಕದ್ದು.

13. **ಪರವಾನಗಿಯ ನಕಲು ಪ್ರತಿಯನ್ನು ನೀಡುವುದು** -

(ಎ) ಪರವಾನಗಿ ಯಾವುದೇ ಸಮಯದಲ್ಲಿ ಕಳೆದುಹೋದರೆ ಅಥವಾ ಹಾನಿಗೊಂಡರೆ, ಪರವಾನಗಿದಾರನು ಕಳೆದುಹೋದ ಅಥವಾ ಹಾನಿಯಾದ ಕ್ಷೇತ್ರವ್ಯಾಪ್ತಿಯಲ್ಲಿನ ಪೊಲೀಸ್ ಠಾಣೆಗೆ ವರದಿಮಾಡತಕ್ಕದ್ದು ಹಾಗೂ ಪರವಾನಗಿ ಪ್ರಾಧಿಕಾರಕ್ಕೆ ಲಿಖಿತದಲ್ಲಿ ವಿಷಯವನ್ನು ತಿಳಿಸತಕ್ಕದ್ದು ಮತ್ತು ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್ ಪೋರ್ಟೇಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016 ರ 4ನೇ ನಿಯಮದ (7)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಿದ ಶುಲ್ಕದೊಂದಿಗೆ ಪರವಾನಗಿಯ ನಕಲು ಪ್ರತಿ

ಅಥವಾ ಪೂರಕ ಪರವಾನಗಿಗಾಗಿ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ವ್ಯಕ್ತಿಗತ ಪ್ರಕರಣದಲ್ಲಿ (ಏಕ ವಿದ್ಯುತ್ ಬೈಕ್ ಟ್ಯಾಕ್ಸಿ) ಶುಲ್ಕವನ್ನು ಸಂಗ್ರಹಿಸತಕ್ಕದ್ದಲ್ಲ.

(ಬಿ) ಉಪಖಂಡ (ಎ) ರಲ್ಲಿ ನಿರ್ದಿಷ್ಟಪಡಿಸಿದ ಶುಲ್ಕದೊಂದಿಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಪರವಾನಗಿ ಪ್ರಾಧಿಕಾರವು ಪರವಾನಗಿಯ ನಕಲು ಪ್ರತಿಯನ್ನು "ನಕಲು" ಎಂದು ಸ್ಪಷ್ಟವಾಗಿ ನಮೂದಿಸಿ ನೀಡಬಹುದು.

(ಸಿ) ಪರವಾನಗಿಯ ನಕಲು ಪ್ರತಿಯನ್ನು ನೀಡಿದ ತರುವಾಯ, ಮೂಲ ಪ್ರತಿಯು ಸಿಕ್ಕಿದ್ದಲ್ಲಿ ಅದನ್ನು ಪರವಾನಗಿ ಪ್ರಾಧಿಕಾರಕ್ಕೆ ಕೂಡಲೇ ಒಪ್ಪಿಸತಕ್ಕದ್ದು.

14. **ಮೇಲ್ಮನವಿ** - ಯೋಜನೆಯ 8, 9, ಮತ್ತು 10ನೇ ಖಂಡಗಳ ಅಡಿಯಲ್ಲಿ ಪರವಾನಗಿ ಪ್ರಾಧಿಕಾರದ ಯಾವುದೇ ಆದೇಶದಿಂದ ಬಾಧಿತನಾದ ಯಾವುದೇ ವ್ಯಕ್ತಿಯು ಆದೇಶವನ್ನು ಸ್ವೀಕರಿಸಿದ (30) ಮೂವತ್ತು ದಿನಗಳೊಳಗಾಗಿ ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್ ಪೋರ್ಟೇಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016 ರ ನಿಯಮ 12 ರ ಅಡಿಯಲ್ಲಿ ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಬಹುದು.

15. **ಪರವಾನಗಿಯನ್ನು ಸ್ವಇಚ್ಛೆಯಿಂದ ಒಪ್ಪಿಸುವುದು** - ಪರವಾನಗಿದಾರನು ಯಾವುದೇ ಸಮಯದಲ್ಲಿ ಆತನಿಗೆ ನೀಡಲಾದ ಪರವಾನಗಿಯನ್ನು ಪರವಾನಗಿ ಮಂಜೂರು ಮಾಡಿದ ಪರವಾನಗಿ ಪ್ರಾಧಿಕಾರಕ್ಕೆ ಮರಳಿ ಒಪ್ಪಿಸಬಹುದು ಮತ್ತು ಅಂಥ ಒಪ್ಪಿಸುವಿಕೆಯ ಮೇರೆಗೆ ಪರವಾನಗಿ ಪ್ರಾಧಿಕಾರವು ಪರವಾನಗಿಯನ್ನು ರದ್ದುಗೊಳಿಸತಕ್ಕದ್ದು. ಪರವಾನಗಿದಾರನು ಪರವಾನಗಿಯನ್ನು ಒಪ್ಪಿಸುವ ಮೊದಲು ಈ ಯೋಜನೆಯ ಅಡಿಯಲ್ಲಿ ಯಾವುದಾದರೂ ಬಾಕಿಗಳು ಇದ್ದಲ್ಲಿ ಅದನ್ನು ಪಾವತಿಸತಕ್ಕದ್ದು.

16. **ಹೆಚ್ಚುವರಿ ಷರತ್ತುಗಳು** – ರಾಜ್ಯ ಸರ್ಕಾರವು ಯಾವುದೇ ಸಮಯದಲ್ಲಿ ಪರವಾನಗಿದಾರನು ಅನುಸರಿಸಬೇಕಾದ ಹೆಚ್ಚುವರಿ ಷರತ್ತುಗಳನ್ನು ಸೇರಿಸಬಹುದು ಮತ್ತು ಕಾಲಕಾಲಕ್ಕೆ ಅದು ನಿರ್ದೇಶಿಸುವಂತಹ ವರದಿಗಳನ್ನು (returns) ಸಲ್ಲಿಸುವಂತೆಯೂ ಸಹ ನಿರ್ದೇಶಿಸಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಇಲಾಖೆ, ವಿಕಾಸ ಸೌಧ ಘಟಕ, ಬೆಂಗಳೂರು:- ಈ ಅಧಿಸೂಚನೆಯನ್ನು ಇಂದೇ ಕರ್ನಾಟಕ ರಾಜ್ಯ ವಿಶೇಷ ರಾಜ್ಯಪತ್ರಿಕೆಯಲ್ಲಿ ಪ್ರಕಟಿಸುವಂತೆ ಕೋರಿದೆ.

# ನಮೂನೆ-1

## [4ನೇ ಖಂಡದ (i)ನೇ ಉಪಖಂಡವನ್ನು ನೋಡಿ]

## ಅಗ್ರಿಗೇಟರ್‌ನ ಪರವಾನಗಿ ಮಂಜೂರಾತಿ/ನವೀಕರಣಕ್ಕೆ ಅರ್ಜಿ

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ/ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ,

ಈ ಕೆಳಗೆ ಸಹಿ ಮಾಡಿರುವ ನಾನು ಈ ಮೂಲಕ ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೇಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016 ರ ಅಡಿಯಲ್ಲಿ ಅಗ್ರಿಗೇಟರನಾಗಿ ಕಾರ್ಯನಿರ್ವಹಿಸುದಕ್ಕಾಗಿ ಪರವಾನಗಿಯ ಮಂಜೂರಾತಿ/ನವೀಕರಣಕ್ಕಾಗಿ ಅರ್ಜಿ ಸಲ್ಲಿಸುತ್ತಿದ್ದೇನೆ.

| | | |
|---|---|---|
| 1. | ಪೂರ್ಣ ಹೆಸರು | |
| 2. | ಮುಖ್ಯ ಕಛೇರಿಯ ವಿಳಾಸ | |
| 3. | ಶಾಖೆಗಳ ಸಂಖ್ಯೆ ಮತ್ತು ಅವುಗಳ ವಿಳಾಸ | |
| 4 | ಎ) ನೋಂದಾಯಿತ ಕಂಪನಿಯಾಗಿದ್ದರೆ, ಮೆಮೊರಾಂಡಮ್ ಆಫ್ ಅಸೋಸಿಯೇಷನ್ ರ ಪ್ರತಿಯೊಂದಿಗೆ ನೋಂದಣಿ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸುವುದು.<br>ಬಿ) ಸಂಸ್ಥೆ ಆಗಿದ್ದಲ್ಲಿ, ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸುವುದು. | |
| 5. | ದೂರವಾಣಿ ಸಂಖ್ಯೆ, ಜಾಲತಾಣ ವಿಳಾಸ ಮತ್ತು ಇ-ಮೇಲ್ ವಿಳಾಸ. | |
| 6. | ಕಾರ್ಯಾಚರಿಸಲು ಪ್ರಸ್ತಾಪಿಸಲಾಗಿರುವ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗಳ ಸಂಖ್ಯೆ (ಪ್ರತಿಯೊಂದು ವಾಹನದ ವಾಹನ ಸಂಖ್ಯೆಯ ವಿವರಗಳನ್ನು ಒಳಗೊಂಡ ಪ್ರತ್ಯೇಕ ಪಟ್ಟಿಯನ್ನು ಲಗತ್ತಿಸುವುದು) | |
| 7. | ಜಿ.ಪಿ.ಎಸ್/ಜಿ.ಪಿ.ಆರ್.ಎಸ್ ಸೌಲಭ್ಯದ ವಿವರಗಳು | |
| 8. | ಇತರ ಮೂಲ ಸೌಕರ್ಯದ ವಿವರಗಳು | |
| 9. | ಆರ್ಥಿಕ ಸ್ಥಿತಿಯ ವಿವರಗಳು | |
| 10. | ಶುಲ್ಕ ಪಾವತಿಸಿದ ವಿವರಗಳು | |
| 11. | ಬ್ಯಾಂಕ್ ಗ್ಯಾರಂಟಿಯ ರೀತಿಯ ಭದ್ರತಾ ಠೇವಣಿಯ ವಿವರಗಳು | |

ಮೇಲೆ ನೀಡಲಾಗಿರುವ ಮಾಹಿತಿ ಮತ್ತು ಇದರೊಡನೆ ಲಗತ್ತಿಸಲಾಗಿರುವ ಇತರ ದಸ್ತಾವೇಜುಗಳು ನನ್ನ ತಿಳುವಳಿಕೆಯ ಮಟ್ಟಿಗೆ ಸರಿಯೆಂದು ಈ ಮೂಲಕ ನಾನು ಘೋಷಿಸುತ್ತೇನೆ. ಯಾವುದೇ ಸಮಯದಲ್ಲೂ ಯಾವುದೇ ಮಾಹಿತಿಯು ತಪ್ಪು ಎಂದು ಕಂಡುಬಂದಲ್ಲಿ, ನನ್ನ ವಿರುದ್ಧ ಇತರ ಕಾನೂನು ಕ್ರಮ/ ಕ್ರಮಗಳನ್ನು ಪ್ರಾರಂಭಿಸುವುದರ ಜೊತೆಗೆ ಮಂಜೂರಾದ ಪರವಾನಗಿಯನ್ನು ರದ್ದುಗೊಳಿಸುವುದಕ್ಕೂ ಹೊಣೆಗಾರನಾಗುತ್ತೇನೆಂದು ನಾನು ಅರ್ಥೈಸಿಕೊಂಡಿದ್ದೇನೆ. ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೇಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016 ನ್ನು ನಾನು ಓದಿಕೊಂಡಿದ್ದೇನೆ; ಸದರಿ ನಿಯಮಗಳನ್ನು ನಾನು ಒಪ್ಪಿಕೊಂಡಿದ್ದು, ಅದನ್ನು ಪಾಲಿಸಲು ಒಪ್ಪಿಕೊಂಡಿರುತ್ತೇನೆ.

ಸ್ಥಳ:

ದಿನಾಂಕ:

ಅರ್ಜಿದಾರನ/ಪ್ರಾಧೀಕೃತ ಸಹಿದಾರನ
ಸಹಿ.

## ನಮೂನೆ-2

**[4ನೇ ಖಂಡದ (iii)ನೇ ಉಪಖಂಡವನ್ನು ನೋಡಿ]**

**ಅಗ್ರಿಗೇಟರ್‌ನಿಗೆ ಪರವಾನಗಿ**

ಶ್ರೀ/ಶ್ರೀಮತಿ/ಮೆಸರ್ಸ್............................................ ಇವರಿಗೆ ನಿಯಮಾವಳಿಗಳಲ್ಲಿನ ಷರತ್ತಿಗೆ ಒಳಪಟ್ಟು ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೆಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016 ರಡಿಯಲ್ಲಿ ಸೇವಾದಾತನಾಗಿ ಕರ್ತವ್ಯ ನಿರ್ವಹಿಸಲು ಈ ಮೂಲಕ ಪರವಾನಗಿ ನೀಡಲಾಗಿದೆ.

| | | |
|---|---|---|
| 1. | ಸೇವಾದಾತನ (Aggregator) ಪೂರ್ಣ ಹೆಸರು | |
| 2. | ಮುಖ್ಯ ಕಛೇರಿಯ ವಿಳಾಸ | |
| 3. | ಶಾಖೆಗಳ ವಿಳಾಸಗಳು | |
| 4 | ದೂರವಾಣಿ ಸಂಖ್ಯೆ, ಜಾಲತಾಣ ವಿಳಾಸ ಮತ್ತು ಇ-ಮೇಲ್ ವಿಳಾಸ. | |
| 5. | ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗಳ ಸಂಖ್ಯೆ (ಲಗತ್ತಿಸಲಾದ ಪಟ್ಟಿಯಂತೆ) | |
| 6. | ಸೇವಾದಾತನು ಕರ್ತವ್ಯ ನಿರ್ವಹಿಸಬೇಕಾದ ಜಾಲತಾಣದ ವಿವರಗಳು. | |
| 7. | ಶುಲ್ಕ ಪಾವತಿಸಿದ ವಿವರಗಳು | |
| 8. | ಬ್ಯಾಂಕ್ ಗ್ಯಾರಂಟಿ ವಿವರಗಳು | |

ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೆಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು, 2016 ರಲ್ಲಿ ಒಳಗೊಂಡಿರುವ ಎಲ್ಲ ಷರತ್ತುಗಳನ್ನು ಪರವಾನಗಿದಾರನು ಗಮನಿಸತಕ್ಕದ್ದು.

ಈ ಪರವಾನಗಿ .................................. ರಿಂದ ..........................ವರೆಗೆ ಸಿಂಧುವಾಗಿರುತ್ತದೆ.

ಸ್ಥಳ:

ದಿನಾಂಕ: ಕಾರ್ಯದರ್ಶಿ,

ರಾಜ್ಯ ಸಾರಿಗೆ ಪ್ರಾಧಿಕಾರ/ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ,

## ನಮೂನೆ-3

**[4ನೇ ಖಂಡದ (ii)ನೇ ಉಪಖಂಡವನ್ನು ನೋಡಿ]**

### ವ್ಯಕ್ತಿಗತ ಪ್ರಕರಣದಲ್ಲಿ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗಾಗಿ ಪರವಾನಗಿ ಮಂಜೂರಾತಿ/ನವೀಕರಣಕ್ಕಾಗಿ ಅರ್ಜಿ

ಇವರಿಗೆ,

ಪ್ರಾದೇಶಿಕ ಸಾರಿಗೆ ಅಧಿಕಾರಿ,
ಪ್ರಾದೇಶಿಕ ಸಾರಿಗೆ ಕಛೇರಿ(ಅಧಿಕಾರ ವ್ಯಾಪ್ತಿ)
ನಗರದ ಹೆಸರು.

ಈ ಕೆಳಗೆ ಸಹಿ ಮಾಡಿರುವ ನಾನು ಈ ಮೂಲಕ ನನ್ನ ಸ್ವಂತ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಯ ಕಾರ್ಯಾಚರಣೆಗಾಗಿ ಪರವಾನಗಿ ಮಂಜೂರಾತಿ/ನವೀಕರಣಕ್ಕಾಗಿ ಅರ್ಜಿ ಸಲ್ಲಿಸುತ್ತಿದ್ದೇನೆ.

| | | |
|---|---|---|
| 1. | ಪೂರ್ಣ ಹೆಸರು | |
| 2. | ವಿಳಾಸ | |
| 3. | ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸ. | |
| 4 | ವಾಹನದ ವಿವರಗಳು | |

ಮೇಲೆ ನೀಡಲಾಗಿರುವ ಮಾಹಿತಿ ಮತ್ತು ಇದರೊಡನೆ ಲಗತ್ತಿಸಲಾಗಿರುವ ಇತರ ದಸ್ತಾವೇಜುಗಳು ನನ್ನ ತಿಳುವಳಿಕೆಯ ಮಟ್ಟಿಗೆ ಸರಿಯೆಂದು ಈ ಮೂಲಕ ನಾನು ಘೋಷಿಸುತ್ತೇನೆ. ಯಾವುದೇ ಸಮಯದಲ್ಲೂ ಯಾವುದೇ ಮಾಹಿತಿಯು ತಪ್ಪು ಎಂದು ಕಂಡುಬಂದಲ್ಲಿ, ನನ್ನ ವಿರುದ್ಧ ಇತರ ಕಾನೂನು ಕ್ರಮ/ ಕ್ರಮಗಳನ್ನು ಪ್ರಾರಂಭಿಸುವುದರ ಜೊತೆಗೆ ಮಂಜೂರಾದ ಪರವಾನಗಿಯನ್ನು ರದ್ದುಗೊಳಿಸುವುದಕ್ಕೂ ಹೊಣೆಗಾರನಾಗುತ್ತೇನೆಂದು ನಾನು ಅರ್ಥೈಸಿಕೊಂಡಿದ್ದೇನೆ.

ಸ್ಥಳ:

ದಿನಾಂಕ: ಅರ್ಜಿದಾರನ ಸಹಿ.

## ನಮೂನೆ-4

### [4ನೇ ಖಂಡದ (iii)ನೇ ಉಪಖಂಡವನ್ನು ನೋಡಿ]

### ವ್ಯಕ್ತಿಗತ ಪ್ರಕರಣಕ್ಕಾಗಿ ಪರವಾನಗಿ

ಶ್ರೀ/ಶ್ರೀಮತಿ/ಮೆಸರ್ಸ್............................................ ಇವರಿಗೆ ಯೋಜನೆಯಲ್ಲಿ ಒಳಗೊಂಡಿರುವ ಷರತ್ತುಗಳಿಗೆ ಒಳಪಟ್ಟು, ಕರ್ನಾಟಕ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಯೋಜನೆ, 2021ರ ಅಡಿಯಲ್ಲಿ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಯಾಗಿ ಆತನ/ಆಕೆಯ ಎಲೆಕ್ಟ್ರಿಕ್ ಬೈಕ್‌ಅನ್ನು ಕಾರ್ಯಾಚರಿಸಲು ಈ ಮೂಲಕ ಪರವಾನಗಿ ನೀಡಲಾಗಿದೆ.

| | | |
|---|---|---|
| 1. | ಸೇವಾದಾತನ ಪೂರ್ಣ ಹೆಸರು | |
| 2. | ವಿಳಾಸ | |
| 3. | ದೂರವಾಣಿ ಸಂಖ್ಯೆ | |

ಕರ್ನಾಟಕ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಯೋಜನೆ, 2021ರಲ್ಲಿ ಒಳಗೊಂಡಿರುವ ಎಲ್ಲ ಷರತ್ತುಗಳನ್ನು ಪರವಾನಗಿದಾರನು ಗಮನಿಸತಕ್ಕದ್ದು.

ಈ ಪರವಾನಗಿ .................................. ರಿಂದ ..........................ವರೆಗೆ ಸಿಂಧುವಾಗಿರುತ್ತದೆ.

ಸ್ಥಳ:

ದಿನಾಂಕ:

ಕಾರ್ಯದರ್ಶಿ
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ,

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ.